# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ:22.09.2021

ಸಂಖ್ಯೆ:ಎಸಿ4/59/2021–22

## ಸುತ್ತೋಲೆ

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ35 ಇಜಿಒವಿ2020, ಬೆಂಗಳೂರು, ದಿನಾಂಕ:27–07–2021
2) ಸರ್ಕಾರದ ಆದೇಶ ಸಂಖ್ಯೆ:ಇಡಿ260 ಇಜಿಒವಿ2019, (ಭಾಗ–01), ದಿನಾಂಕ:07–08–202
3) ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಎಸಿ4/59/2021–22, ದಿನಾಂಕ:23–08–2021
4) ಸರ್ಕಾರದ ಆದೇಶ ಸಂಖ್ಯೆ:ಇಡಿ260 ಇಜಿಒವಿ2019, (ಭಾಗ–01), ದಿನಾಂಕ:15–09–2021

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, **2021–22ನೇ** ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಉಲ್ಲೇಖಿತ–03ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಲ್ಲಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು (ಅನುಬಂಧ–1ನ್ನು) ಲಗತ್ತಿಸಿ ಕಳುಹಿಸಲಾಗಿತ್ತು. ಅದರ ಮುಂದುವರಿಕೆಯಾಗಿ, ಅನುಬಂಧ–1ರಲ್ಲಿರುವ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ 01 ರಿಂದ 03ಕ್ಕೆ ವಿವರಣೆ/ಸ್ಪಷ್ಟೀಕರಣಗಳನ್ನು ಉಲ್ಲೇಖಿತ(4)ರ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ಪ್ರಯುಕ್ತ, ಅದರಂತೆ ಕ್ರಮವಹಿಸಲು ತಿಳಿಸಿದೆ.

(ಉಲ್ಲೇಖಿತ 04ರ ಸರ್ಕಾರದ ಆದೇಶದಲ್ಲಿರುವ ಅನುಬಂಧ–'ಅ'ನ್ನು ಈ ಸುತ್ತೋಲೆಯ ಜೊತೆ ಲಗತ್ತಿಸಲಾಗಿದೆ.)

22/9
ಉಪ ಕುಲಸಚಿವ(ಶೈಕ್ಷಣಿಕ)

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ಬಿ.ಎಸ್ಸಿ./ಬಿ.ಸಿ.ಎ./ ಬಿ.ಕಾಂ./ ಬಿ.ಬಿ.ಎ/ಬಿ.ಬಿ.ಎ(ಟೂರಿಸಂ ಆಂಡ್ ಟ್ರಾವಲ್)/ ಬಿ.ಎ(ಫೈನ್ ಆರ್ಟ್ಸ್)/ ಬಿ.ಬಿ.ಎ.(ಟೂರಿಸಂ & ಹಾಸ್ಪಿಟಾಲಿಟಿ)/ಬಿ.ಎಸ್.ಡಬ್ಲ್ಯೂ./ಬಿ.ವಿಶ್ಯುಲ್ ಆರ್ಟ್ಸ್.(ನಾಲ್ಕು ವರ್ಷ)/ / ಬಿ.ಎ. ಎಸ್ ಎಲ್ ಪಿ, ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– **ಸೂಕ್ತ ಕ್ರಮಕ್ಕಾಗಿ.**
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮಾ.ಗಂ., ಮೈಸೂರು.
3. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾ.ಗಂ., ಮೈಸೂರು.
4. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
5. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

6. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.– **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**
7. ಉಪಕುಲಸಚಿವ/ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ ಕಟ್ಟಡ, ಮೈವಿವಿ, ಮೈಸೂರು.
8. ಸಂಬಂಧಪಟ್ಟ ಎಲ್ಲಾ ಉಪ ಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು/ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈ.ವಿ.ವಿ, ಮೈಸೂರು.
10. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಸ್ಪಷ್ಟೀಕರಣ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019 (ಭಾಗ-1), ದಿನಾಂಕ: 07.08.2021.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರವರ ಪತ್ರ ಸಂಖ್ಯೆ: ಕರಾಉಶಿಪ ವಿಸಿಪಿ/9/ 2021-22, ದಿನಾಂಕ 04.09.2021.

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ: (1) ದಿನಾಂಕ: 07.08.2021ರ ಆದೇಶದಲ್ಲಿ, ಭಾರತ ಸರ್ಕಾರವು ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2021-22ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳೊಂದಿಗೆ ಆದೇಶಿಸಲಾಗಿತ್ತು.

ಸದರಿ ಮಾರ್ಗಸೂಚಿಗಳಿಗೆ ಸಂಬಂಧಪಟ್ಟಂತೆ ಕೆಲವು ಸ್ಪಷ್ಟೀಕರಣಗಳನ್ನು ಈ ಕೆಳಗಿನಂತೆ ನೀಡಲು ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019 (ಭಾಗ-1),**
**ಬೆಂಗಳೂರು, ದಿನಾಂಕ: 15.09.2021.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ದಿನಾಂಕ: 07.08.2021ರ ಆದೇಶದಲ್ಲಿನ ಅನುಬಂಧ-1ರಲ್ಲಿರುವ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ 1 ರಿಂದ 3 ಕ್ಕೆ ವಿವರಣೆ / ಸ್ಪಷ್ಟೀಕರಣಗಳನ್ನು ನೀಡಿ ಅನುಬಂಧ-ಅ ರಲ್ಲಿರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
(ವಿಶ್ವವಿದ್ಯಾಲಯ-1)
ಉನ್ನತ ಶಿಕ್ಷಣ ಇಲಾಖೆ

AC-H
20/9

ರವರಿಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಛೇರಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.

2...

P.T.O

ಅನುಬಂಧ-ಅ

1. ಪ್ರಸಕ್ತ ವರ್ಷಕ್ಕೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬಿ.ಎ. ಅಥವಾ ಬಿ.ಎಸ್‌ಸಿ. ಪದವಿ ಅಧ್ಯಯನಕ್ಕೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಎರಡು ವಿಷಯಗಳನ್ನು (Discipline Core) ಆಯ್ಕೆ ಮಾಡಿಕೊಳ್ಳಬೇಕು. ನಂತರ ಮೂರನೇ ವರ್ಷದ ಪ್ರಾರಂಭದಲ್ಲಿ ಈ ಎರಡು ವಿಷಯಗಳಲ್ಲಿ ಒಂದು ವಿಷಯವನ್ನು ಮೇಜರ್ ಆಗಿಯೂ, ಇನ್ನೊಂದು ವಿಷಯವನ್ನು ಮೈನರ್ ವಿಷಯವನ್ನಾಗಿಯೂ ಅಥವಾ ಎರಡೂ ವಿಷಯಗಳನ್ನು ಮೇಜರ್ ಆಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದು. ಮೂರನೇ ವರ್ಷದಲ್ಲಿ ಅಧ್ಯಯನ ಮಾಡಿದ ಒಂದು ಮೇಜರ್ ವಿಷಯವನ್ನು ನಾಲ್ಕನೇ ವರ್ಷದಲ್ಲಿ ಅಧ್ಯಯನ ಮಾಡಿ, ಆ ವಿಷಯದಲ್ಲಿ ಆನರ್ಸ್ ಪದವಿಯನ್ನು ಪಡೆಯಬಹುದು.

**Open Elective ಆಯ್ಕೆ:**

ವಿದ್ಯಾರ್ಥಿಯು ಮೊದಲ ವರ್ಷದ ಪ್ರಾರಂಭದಲ್ಲಿ discipline core ವಿಷಯಗಳ ಜೊತೆಗೆ ಒಂದು Open Elective (OE) ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಯು ಮೊದಲನೇ ವರ್ಷ ಆಯ್ಕೆ ಮಾಡಿಕೊಂಡ ವಿಷಯದಲ್ಲಿಯೇ Open elective (OE) ಅನ್ನು ಮುಂದುವರೆಸಬಹುದು ಅಥವಾ ಪ್ರತಿಯೊಂದು ಸೆಮಿಸ್ಟರ್‌ನಲ್ಲೂ Open Elective ಅನ್ನು ಬೇರೆ ಬೇರೆ ವಿಷಯಗಳಲ್ಲಿ ತೆಗೆದುಕೊಂಡು ಅಧ್ಯಯನ ಮಾಡಬಹುದು.

2. ಪದವಿಯ ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ ಎರಡು ಭಾಷೆಗಳನ್ನು ವಿದ್ಯಾರ್ಥಿಗಳು ಕಲಿಯಬಹುದಾಗಿದೆ. ಎರಡು ಭಾಷೆಗಳ ಪೈಕಿ ಒಂದು ಭಾಷೆಯಾಗಿ ಕನ್ನಡದ ಕಲಿಕೆಯನ್ನು ಎಲ್ಲಾ ನಾಲ್ಕು ಸೆಮಿಸ್ಟರ್ ಗಳಲ್ಲಿ ಕಡ್ಡಾಯಗೊಳಿಸಲಾಗಿದೆ. ಕನ್ನಡದ ಜೊತೆ ವಿದ್ಯಾರ್ಥಿಯು ತನ್ನ ಆಸಕ್ತಿಯ ಮತ್ತೊಂದು ಭಾಷೆಯನ್ನು ಕಲಿಯಬಹುದಾಗಿದೆ.

ಆದರೆ ಹೊರ ರಾಜ್ಯದ/ಹೊರದೇಶದ ವಿದ್ಯಾರ್ಥಿಗಳಿಗೆ ಹಾಗೂ ಎರಡನೇ PUC ವರೆಗೆ ಯಾವುದೇ ಹಂತದಲ್ಲಿ ಕನ್ನಡವನ್ನೇ ಕಲಿಯದ ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಕನ್ನಡ (Functional Kannada) ವನ್ನು ಮಾತ್ರ ಮೊದಲ ವರ್ಷದ ಯಾವುದಾದರೂ ಒಂದು ಸೆಮಿಸ್ಟರ್‌ನಲ್ಲಿ ಕಲಿಯುವುದು ಕಡ್ಡಾಯವಾಗಿರುತ್ತದೆ. ಕನ್ನಡದ ಜೊತೆ ಈ ವಿದ್ಯಾರ್ಥಿಯು ತನ್ನ ಆಸಕ್ತಿಯ ಮತ್ತೊಂದು ಭಾಷೆಯನ್ನು ಕಲಿಯಬಹುದಾಗಿದೆ. ಭಾಷೆ ಕಲಿಯಬೇಕಾದ ನಾಲ್ಕು ಸೆಮಿಸ್ಟರ್‌ಗಳ ಪೈಕಿ ಇನ್ನುಳಿದ ಮೂರು ಸೆಮಿಸ್ಟರ್‌ಗಳಲ್ಲಿ ಸದರಿ ವಿದಾರ್ಥಿಗಳು ತಮ್ಮ ಆಯ್ಕೆಯ ಯಾವುದೇ ಎರಡು ಭಾಷೆಗಳನ್ನು ಕಲಿಯಬಹುದಾಗಿರುತ್ತದೆ.

ವಿದ್ಯಾರ್ಥಿಗಳು ಮೇಲಿನಂತೆ ಭಾಷೆ/ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಪ್ರತಿ ವರ್ಷ ಬೇರೆ ಬೇರೆ ಭಾಷೆ/ಭಾಷೆಗಳನ್ನು ಆಯ್ಕೆಮಾಡಿಕೊಳ್ಳುವ ಅವಕಾಶವಿರುತ್ತದೆ.

3.ವಿಷಯಾಧಾರಿತ ಸ್ನಾತಕ ಪದವಿ ಅಧ್ಯಯನಗಳಲ್ಲಿ (B.Com, BCA, BBA, BVA, BPA, etc.) ವಿಷಯ (Discipline core) ನಿರ್ಧರಿತವಾಗಿರುತ್ತದೆ. ಹಾಗಾಗಿ ಬಿ.ಎ., ಬಿ.ಎಸ್ಸಿ ಪದವಿಗಳಲ್ಲಿ ಇರುವ ಹಾಗೆ ಬೇರೆ ಬೇರೆ ವಿಷಯಗಳನ್ನು (Discipline Core) ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆ ವಿಷಯಾಧಾರಿತ ಪದವಿಗಳಲ್ಲಿ ಇರುವುದಿಲ್ಲ. ಅವರು ಕೇವಲ ಕನ್ನಡ ಮತ್ತು ಇತರ ಭಾಷೆಗಳನ್ನು ಮತ್ತು Open Electives ಗಳನ್ನು ಮೇಲೆ ಹೇಳಿರುವಂತೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬೇಕು.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
(ವಿಶ್ವವಿದ್ಯಾಲಯಗಳು-1)
ಉನ್ನತ ಶಿಕ್ಷಣ ಇಲಾಖೆ